(HON'BLE SRI K. CHENGALARAYA REDDY).

that they promised and the Government of India also are taking necessary steps in order to give us that quantity.

Janab SYED ABDUR RAHMAN.—In case the quota that is to be got from the Government of India is not reaching the State of Mysore in time, will it not cause a certain amount of embarrassment?

The Hon'ble Sri K. CHENGALARAYA REDDY.—The answer is certainly 'yes'; obviously not a certain amount only but a great deal of embarrassment.

Janab SYED ABDUR RAHMAN.—How could that be tided over?

The Hon'ble Sri K. CHENGALARAYA REDDY.—It is a very hypothetical question. If the promised allotments are not forthcoming, we have to consider what to do to tide over the difficult position. In fact, we have been continuously urging for another 14,000 tons of rice in order to ease the rice position in the State. We have been continuously urging on the Government the great necessity for increasing the rice quota. We have not yet got any promise from them to increase the rice quota and we are considering how best to tide over the situation.

Sri A. BHEEMAPPA NAIK (Chitaldrug District—General).—What are the areas in which there is failure of rains?

The Hon'ble Sri K. CHENGALARAYA REDDY.—I think there is a resolution tabled by the Hon'ble Member regarding this subject. He will get full information on that point at that time. Moreover, in the beginning of the session at Mysore I gave full particulars as to the particular areas where rains failed.

Sri A. BHEEMAPPA NAIK.—What is the policy of the Government in regard to the quantity of foodgrains proposed to be procured in those areas where rains have failed?

Mr. SPEAKER.—That does not arise.

Frequent interruptions to power supply in Bangalore.

Q.—172. **Sri K. R. SREEKANTESWAR** (Bangalore City—General).—

Will the Government be pleased to state:—

(*a*) the reasons for frequent failures of power supply in Bangalore;

(*b*) whether they are aware that failure of power supply especially between the hours 7 P.M. to 10 P.M. causes great hardship to the public;

(*c*) whether they have received complaints in regard to the above?

A.—**The Hon'ble Sri K. T. BHASHYAM** (Minister for Law and Labour).—

(*a*) The interruptions to power supply are mostly due to the weather conditions which affect the long high tension transmission lines from Sivasamudram and Jog.

(*b*) Yes.

(*c*) Yes.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ತಾವು ಕೆಲವು ಕಾರಣಗಳನ್ನೇನೋ ಕೊಟ್ಟಿದ್ದೀರಿ. ಅನೇಕ ವೇಳೆ ಇದ್ದಿಕ್ಕಿದ್ದಹಾಗೆಯೇ, ರಾತ್ರಿ ಕಾಲದಲ್ಲಿ ಬಸವನಗುಡಿ ಸರಹದ್ದಿನಲ್ಲಿಯೆ, ಈ ವಿದ್ಯುಚ್ಛಕ್ತಿ ದೀಪಗಳು ಕೆಡುತ್ತಿರುವುದಕ್ಕೆ ಕಾರಣವೇನು?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಆಗಲು ನಾನಾ ಕಾರಣಗಳಿವೆ. ಅವುಗಳ ಪೈಕಿ ಹವಾಗುಣಗಳಲ್ಲಿ ಬದಲಾವಣೆಯಾಗುವುದು, ಕೆಲವು ವೇಳೆ ಮರದ ರೆಂಬೆಗಳು ತಗುಲಿ ವಿದ್ಯುಚ್ಛಕ್ತಿಯ ಲೈನು ನಿಂತುಹೋಗುವುದು, ಮತ್ತೆ ಕೆಲವು ಸಂದರ್ಭಗಳಲ್ಲಿ ಪಕ್ಷಿಗಳು ಕಡ್ಡಿಗಳನ್ನು ಹಾಕುವುದು—ಇಂಥವುಗಳಿಂದ short circuit ಆಗಿಯೂ ಮತ್ತೆ ಅನೇಕ ಸಂದರ್ಭಗಳಲ್ಲಿ ಮನೆಗಳಲ್ಲಿರತಕ್ಕ ಸ್ವಿಚ್‌ಗಳು ಸುಟ್ಟುಹೋಗುವುದು, ಇತ್ಯಾದಿ ನಾನಾ ಕಾರಣಗಳಿವೆ. ಅದಕ್ಕೆ ಇಂಥಾದ್ದೇ ಕಾರಣವೆಂದು ಹೇಳುವುದಕ್ಕಾಗುವುಲ್ಲ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—(ಸಿ) ಪ್ರಶ್ನೆಗೆ ಉತ್ತರವಾಗಿ ದೂರುಗಳು ಬಂದಿವೆಯೆಂದು ತಾವು ತಿಳಿಸಿದ್ದೀರಿ. ಆದರೆ ಆ ಬಗ್ಗೆ

ತಾವು ಏನು ಪರಿಹಾರೋಪಾಯವನ್ನು ಕೈಗೊಂಡಿದ್ದೀರಿ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಯಾವ ಯಾವ ಪರಿಹಾರ ಮಾರ್ಗಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲಾ ಕೈಗೊಳ್ಳಲಾಗಿದೆ. ಎಲ್ಲೆಲ್ಲಿ ಅಂಥಾ ತೊಂದರೆಗಳಾಗಿರುತ್ತೆಂದು ವರ್ತಮಾನ ಬರುತ್ತದೋ ಅಂಥಾ ಸ್ಥಳಗಳಿಗೆ ಕೂಡಲೇ ಲೈನ್ ಇನ್‌ಸ್ಪೆಕ್ಟರುಗಳನ್ನು ಕಳುಹಿಸಿ ಪರೀಕ್ಷೆ ನಡೆಸಿ, ಪೋಲಿನಲ್ಲಿ ಫ್ಯೂಸ್ ಹೋಗಿದ್ದರೆ ಅಥವಾ ಲೈನ್ ಷಾರ್ಟ್ ಆಗಿ ಬೆಳಕು ನಿಂತುಹೋಗಿದ್ದರೆ ಅಂಥಾದ್ದನ್ನೆಲ್ಲಾ ಕೂಡಲೆ ಸರಿಪಡಿಸಲಾಗುತ್ತಿದೆ. ಹೀಗೆ ಆಯಾಯ ಸಂದರ್ಭನೋಡಿಕೊಂಡು ಅಲ್ಲಿಗೆ ತಕ್ಕ ಪರಿಹಾರಗಳನ್ನು ಆಗಿಂದಾಗ್ಗೆ ಕೊಡಲಾಗುತ್ತಿದೆ.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಬೆಂಗಳೂರು ಕಾರ್ಪೊರೇಷನ್ ಪ್ರದೇಶದ ಕೆಲವು ಭಾಗಗಳಲ್ಲಿ ಅನೇಕ ತಿಂಗಳುಗಳಗಟ್ಟಲೆ ಬೆಳಕೇ ಇಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಅನೇಕ ತಿಂಗಳುಗಳಗಟ್ಟಲೆ ಬೆಳಕು ಇಲ್ಲದಂತೆ ಇರತಕ್ಕ ಪ್ರದೇಶ ಯಾವುದೂ ಇದ್ದ ಹಾಗೆ ಕಂಡುಬಂದಿಲ್ಲ. ಹಾಗೇನಾದರೂ ಇದ್ದಲ್ಲಿ ಅದು ಕಾರ್ಪೊರೇಷನ್ನಿನವರ ತಪ್ಪು. ಅಂಥಾ ವಿಚಾರಗಳ ಬಗ್ಗೆ ಇಲಾಖೆಯವರೂ ಸಹ ಗಮನಕೊಡುತ್ತಿದ್ದಾರೆ. ಆದರೆ ಅದು ಮುಖ್ಯವಾಗಿ ಕಾರ್ಪೊರೇಷನ್ನಿಗೆ ಸೇರಿರತಕ್ಕದ್ದಾಗಿದೆ. The utmost time during which one of the lines will not be burning is two or three days depending upon the vigilance.

ಶ್ರೀ ಕೆ. ಆರ್. ಶ್ರೀಕಂಠೇಶ್ವರ್‌ರವರು.—ಆದರೆ ವಿದ್ಯುಚ್ಛಕ್ತಿ ಇಲಾಖೆಯವರು ಬಹಳ ನಿಧಾನದಿಂದ ಕೆಲಸ ಮಾಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗಿಲ್ಲ. ಈ ವಿದ್ಯುಚ್ಛಕ್ತಿ ಇಲಾಖೆಯ ಕೆಲಸಗಳು ವಿದ್ಯುಚ್ಛಕ್ತಿಯ ವೇಗದಲ್ಲೇ ನಡೆಯಬೇಕೆಂದು ನಾವು ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಡಬ್ಳು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಲೈಟುಗಳು ಕೆಟ್ಟುಹೋದ ಸಂದರ್ಭಗಳಲ್ಲಿ ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕಾರ್ಪೊರೇಷನ್ನಿನವರು ತೆಗೆದುಕೊಳ್ಳಬೇಕೆಂದಿದೆಯೋ ಅಥವಾ ಇಲಾಖೆಯವರು ತೆಗೆದುಕೊಳ್ಳಬೇಕೆಂದಿದೆಯೋ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಮೂವಿಂಗ್ ಸ್ಕ್ವಾಡ್ ಎಂಬುದೊಂದಿದೆ. ಅದರಲ್ಲಿರತಕ್ಕ ಲೈನ್ ಇನ್‌ಸ್ಪೆಕ್ಟರುಗಳು ಆ ಕೆಲಸ ನೋಡಿಕೊಳ್ಳಬೇಕೆಂದಿದೆ. ಆದರೆ ಅವರಿಗೆ ತಿಳಿಸತಕ್ಕವರೊಬ್ಬರು ಇರಲೇಬೇಕು. ಯಾವ ಸಾರ್ವಜನಿಕರಾದರೂ ಪರವಾಇಲ್ಲ. ಅಂಥಾದ್ದನ್ನು ತಿಳಿಸಿದರೆ ಕೂಡಲೇ ಅದನ್ನು ಸರಿಪಡಿಸಲಾಗುತ್ತದೆ. But I suggest that the Corporation also should have an inspection staff to see that all the lights are kept burning. Because they pay royalty they have got to get the return for what they pay.

ಶ್ರೀ ಡಬ್ಳು. ಎಚ್. ಹನುಮಂತಪ್ಪನವರು.—ತಾವೀಗ ಮರದ ಕೊಂಬೆಗಳಿಂದಲೂ ಕೆಲವು ವೇಳೆ ತೊಂದರೆಗಳುಂಟಾಗುತ್ತವೆಂದು ತಿಳಿಸೋಣವಾಯಿತು. ಅಂಥಾ ಸಂದರ್ಭಗಳು ಎಲ್ಲೆಲ್ಲಿರುತ್ತವೆಂಬುದನ್ನು ಮೊದಲೇ ನೋಡಿಕೊಂಡು ಆ ಬಗ್ಗೆ ಮುಂಜಾಗ್ರತೆ ಕಾರ್ಯಕ್ರಮವನ್ನು ಕೈಗೊಂಡು, ಅಂಥಾ ಮರಗಳ ಕೊಂಬೆಗಳನ್ನು ಕತ್ತರಿಸುವುದಕ್ಕಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವು ವೇಳೆ ಅಂಥಾತೊಂದರೆ, ಖಾಸಗೀ ಜನರ ಕಾಂಪೌಂಡಿನಲ್ಲಿರತಕ್ಕ ಮರಗಳಿಂದ ಉಂಟಾಗುತ್ತೆ. ಆಗ ಕೊಂಬೆಗಳನ್ನು ಕತ್ತರಿಸಲು ಅವರು ಒಪ್ಪುವುದಿಲ್ಲ. ಅವರನ್ನು ಕೆಲವು ವೇಳೆ ಸಮಾಧಾನಮಾಡಬಹುದು. ಇನ್ನು ಕೆಲವು ವೇಳೆ ಕೋರ್ಟಿಗೆ ಸಹ ಹೋಗಬೇಕಾಗಿ ಬರುತ್ತೆ. ಇದನ್ನೆಲ್ಲಾ ನೋಡಿಕೊಂಡು ಕೆಲಸಮಾಡುತ್ತಿದ್ದೇವೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ತಾವು ವಿದೇಶಕ್ಕೆ ಹೋಗಿ ಅಲ್ಲಿ ಎಲ್ಲಾ ನೋಡಿದ್ದೀರಿ. ಅಲ್ಲಿರುವಂತೆ ಇಲ್ಲೂ ಅದೇ ರೀತಿಯಲ್ಲಿ ಉತ್ತಮಸ್ಥಿತಿಗೆ ತರುವುದಕ್ಕೆ ಸಾಧ್ಯವಿಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸಾಧ್ಯವಿದೆ. ಅಲ್ಲಿ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕಿದ್ದಾರೆ. ಹಾಗೆ ನಾವು ಮಾಡುವುದಕ್ಕೆ ನಮ್ಮಲ್ಲಿ ಸಾಕಾದಷ್ಟು ದುಡ್ಡಿಲ್ಲ, ದುಡ್ಡಿದ್ದರೆ ಕೇಬಲ್ಸ್ ಇಲ್ಲ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಬೇಕಾದಷ್ಟು ಖರ್ಚುಮಾಡುತ್ತಿದ್ದೀವೆಂದು ಹೇಳುವಾಗ ಹಣವೇಕಿಲ್ಲ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕಲು 90 ಲಕ್ಷ ರೂಪಾಯಿಗಳ ಯೋಜನೆ ತಯಾರುಮಾಡಿದರೂ ಖರ್ಚುಮಾಡಲು ಸಾಕಷ್ಟು ಹಣ ದೊರೆಯಲಿಲ್ಲ ಮತ್ತು ಕೇಬಲ್ಸ್ ಸಿಕ್ಕುವುದಿಲ್ಲ.

ಶ್ರೀ ಜಿ. ಎ. ಆಚಾರ್ಯರು.—ವಿದೇಶ ಯಾತ್ರೆಯಿಂದ ಇನ್ನುಮುಂದಾದರೂ ಟಕ್ನಿಕಲ್ ಡಿಫೆಕ್ಟ್ ಇದೆಯೆಂಬುದು ನಿಮಗೆ ಗೊತ್ತಾಯಿತು. ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕುವುದು ಒಳ್ಳೆಯದಾದ್ದರಿಂದ ಬಡಾವಣೆಯೋಜನೆ ಮಾಡುವಾಗಲಾದರೂ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕಲು ಏನಾದರೂ ಅವಕಾಶ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಹಾಗೆ ಹೇಳುವುದಕ್ಕಾಗುವುದಿಲ್ಲ. ವಿದೇಶ ಯಾತ್ರೆಯಿಂದ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕುವುದು ಒಳ್ಳೆಯದೆಂದು ಗೊತ್ತಾಯಿತೆಂದು ಹೇಳುವುದು ಸರಿಯಲ್ಲ. ಮೊದಲೇ ಅದು ಗೊತ್ತಿತ್ತು. ಆದರೆ ಸಾಮಾನು ಸಿಕ್ಕುವುದಿಲ್ಲ. ಮತ್ತು ಇನ್ನು ಮುಂದೆ ಬಡಾವಣೆಮಾಡುವುದಕ್ಕೆ ಅಂಡರ್‌ಗ್ರೌಂಡ್ ಕೇಬಲ್ಸ್ ಹಾಕುತ್ತೇವೆಂದು ಹೇಳಿದರೆ ಹೆಚ್ಚು ಕಾಲಾವಧಿ ಬೇಕಾಗುತ್ತದೆ. ಸಾಮಾನ್ಯವಾಗಿ ತೊಂದರೆಯಾಗದಂತೆ ನೋಡಿ ಹಾಕಬೇಕಾಗುತ್ತದೆ. ಈಗ ಒಂದು ಕಡೆ ದೀಪಬೇಕು, ಪಂಪ್‌ಬೇಕು ಎಂದು ಯಾರಾದರೂ ಕೇಳಬಹುದು. ಆಗ ಅವರಿಗೆ ಅಂಡರ್‌ಗ್ರೌಂಡ್ ಕೇಬಲ್ಸ್ ಬರುವವರೆಗೆ ಕಾಯಬೇಕೆಂದು ಹೇಳಿದರೆ ಅದು ಬರುವುದಕ್ಕೆ ಎರಡು ವರ್ಷಗಳು ಕಾಯಬೇಕಾಗಬಹುದು. ಆದ್ದರಿಂದ ಎರಡು ವರ್ಷಗಳು ಸುಮ್ಮನಿರಿ ಎಂದು ಅವರಿಗೆ ಹೇಳುವುದು ಹೇಗೆ? ಅದನ್ನು ತಾವು ಯೋಚನೆಮಾಡಿ.

ಶ್ರೀ ಜಿ. ಎ. ಆಚಾರ್ಯರು.—ಅಪಾಯಕರವೆಂದು ತಿಳಿದಮೇಲೂ ಕೂಡ ಹಾಗೆ ಮಾಡುವುದು ತಪ್ಪಲ್ಲವೆ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇಂಟರಪ್ಷನಿಂದ ತೊಂದರೆ, ಅಷ್ಟೆ. ಅಪಾಯದ ಪ್ರಶ್ನೆ ಇಲ್ಲ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಲೇಖನವನ್ನು ಹಾಕಿ ಟೀಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Does it represent the true state of affairs?

The Hon'ble Sri K. T. BHASHYAM.—It does not represent the true state of affairs in entirety. To some extent it represents the truth.

Sri K. SAMPANGIRAMIAH.—It was stated in a cartoon somewhere that even if a person sneezes the wires would snap. Is that so?

The Hon'ble Sri K. T. BHASHYAM.—I do not know. Either the wire must be too delicate that it snaps at a person sneezing or the sneezing is perhaps too powerful. Anyway I have not come across any such instances.

Mr. SPEAKER.—The Hon'ble Minister for Revenue and the Hon'ble Home Minister are not here.

Appointments of Lecturers, Professors and Assistant Professors.

Q.—173. Sri K. R. SREEKANTESWAR (Bangalore City—General).—

Will the Government be pleased to state :—

(*a*) how many Lecturers, Professors and Assistant Professors have been appointed during the last four years ;